ಪಕ್ಷ ಮತ್ತು ಅದರ ಅಂಗಸಂಸ್ಥೆಗಳ ಬೆಂಬಲವಿರುವುದು ನಮಗೆ ಕಾಣುತ್ತದೆ.

ಈ ಮೂರೂ ಕಥೆಗಳಲ್ಲಿ ನಮಗೆ ಕಾಣುವ ಸಮಾನ ಅಂಶವೆಂದರೆ, ಇವರುಗಳ ಜನಪ್ರಿಯತೆ ಕೇವಲ ಸ್ವಯಂಭೂ – ತಮ್ಮ ಸಾಹಿತ್ಯ, ಸಂಗೀತ, ಬರವಣಿಗೆಯ ಮೂಲಕ ಮಾತ್ರ ಉಂಟಾದದ್ದಲ್ಲ ಎನ್ನುವ ಗಹನ ವಿಚಾರ. ಈ ಮೂರೂ ಕಥೆಗಳಲ್ಲಿ ಒಂದು ಹಂತದಲ್ಲಿ ಭ್ರಮನಿರಸನವಾಗುತ್ತದೆ. ಸರ್ಕಾರ ನಡೆಸುವ ಪಕ್ಷದ ಅಂಗಸಂಸ್ಥೆಗಳ ನೇರ ಬೆಂಬಲವಿಲ್ಲದಿದ್ದರೆ ಸೊರಗುವ ಲಕ್ಷಣಗಳನ್ನು ತೋರುವ ಈ ಇಕೋಸಿಸ್ಟಂನ ಕ್ಷಣ ಭಂಗುರತೆಯೂ ನಮಗೆ ಗೊತ್ತಾಗುತ್ತದೆ.

ಕವಿ ಸಿಂಗ್ ಗಂಡನಿಂದ ಬೇರಾಗುತ್ತಾಳೆ. ದತ್ತು ತೆಗೆದುಕೊಂಡ ತಂದೆ ದೂರಾಗುತ್ತಾನೆ. ಅವಳ ವೃತ್ತಿಗೆ ತೀವ್ರ ಧಕ್ಕೆ ಉಂಟಾಗುತ್ತದೆ. ಒಂದು ಮಟ್ಟದ ಭ್ರಮನಿರಸನವೂ ಆಗುತ್ತದೆ. ಅವಳು ಕೆಲಸ ಮಾಡುವ 'ವ್ಯವಸ್ಥೆ'ಯ ಬೆಂಬಲ ಇಲ್ಲವಾಗಿದೆ. ಧ್ರುವತಾರೆಯಂತೆ ಮಿನುಗಿದ ಆಕೆ ಇದ್ದಕ್ಕಿದ್ದ ಹಾಗೆ ಜನರ ನೆನಪಿನಿಂದ ಮಾಯವಾಗುತ್ತಾಳೆ. ನಿಧಾನವಾಗಿ ತನ್ನ ಹೆಸರನ್ನು ಮರುಸ್ಥಾಪಿಸಲು ಪ್ರಾರಂಭಿಸುತ್ತಾಳೆ. ಹಾಗೇ ಕಮಲ್ ಆಗ್ನೇಯ್ ಕೂಡಾ ಒಂದು ಮಟ್ಟದಲ್ಲಿ ವ್ಯವಸ್ಥೆಯ ಬಗ್ಗೆ ಭ್ರಮನಿರಸನಗೊಳ್ಳುತ್ತಾನೆ. ಚುನಾವಣಾ ಅಭ್ಯರ್ಥಿಗಳ ರ್‍ಯಾಲಿಗಳಲ್ಲಿ ಕಾವೇರಿಸಿದ ಅವನಿಗೆ ತನ್ನ ವಿಚಾರಧಾರೆಯ ಸರ್ಕಾರ ಬಂದಾಗ ಏನೂ ಸಿಗುವುದಿಲ್ಲ. ಅಕಾಡೆಮಿ ಮತ್ತಿತರ ಜಾಗಗಳಲ್ಲಿ ಸಮತೋಲನವನ್ನು ಕಾಪಾಡಲು ಕಮಲ್ ರೀತಿಯ ತೀವ್ರತೆಯ ವಿಚಾರಧಾರೆಯಿರುವವರನ್ನು ಬದಿಗಿಡುತ್ತಾರೆ. ವಾತಾವರಣ ಗರಮಾಯಿಸು ಎಂದು ಹೇಳಿದವರೇ ಇವನತ್ತ ಥಂಡಾ ಆಗುತ್ತಾರೆ. ಇದರಿಂದ ಅವನು ಭ್ರಮನಿರಸನಗೊಳ್ಳುತ್ತಾನೆನ್ನುವುದು ನಿಜವೇ ಆದರೂ, ಅವನು ತನ್ನ ವಿಚಾರಧಾರೆಯನ್ನು ಬದಲಿಸುವುದಿಲ್ಲ. ಬದಲಿಗೆ ಇನ್ನೂ ತೀವ್ರ ಬಲಪಂಥದತ್ತ ವಾಲುತ್ತಾನೆ. ಸಂದೀಪ್ ದೇವ್ ಕಥೆಯೇ ಬೇರೆ. ಕಾಶಿ ಕಾರಿಡಾರ್ ಕಟ್ಟುವ ಸಂದರ್ಭದಲ್ಲಿ ಅನೇಕ ಪುರಾತನ ಮಂದಿರಗಳನ್ನು ನುಚ್ಚುನೂರು ಮಾಡಿ ಆ ಊರಿನ ಸೌಂದರ್ಯೀಕರಣದ ಕೆಲಸ ಕೈಗೊಂಡರು ಎನ್ನುವುದು ಅವನನ್ನು ಕಾಡುತ್ತದೆ. ಇದ್ದಕ್ಕಿದ್ದ ಹಾಗೆ ಅವನು ಮೋದಿಯ ವಿರೋಧಿಯಾಗುತ್ತಾನೆ. ಮೋದಿ ವಿರೋಧಿಯಾದರೂ, ಹಿಂದುತ್ವದ ಕಟ್ಟಾ ಸಮರ್ಥಕನಾಗಿ ಯೋಗಿ ಆದಿತ್ಯನಾಥರಲ್ಲಿ ಸಾಧ್ಯತೆಗಳನ್ನು ಕಾಣುತ್ತಾನೆ. ಅವನ ವಸ್ತುನಿಷ್ಠತೆಯಲ್ಲಿ ಮೋದಿಯ ವಿರುದ್ಧ, ಮತ್ತು ಯೋಗಿಯ ಪರವಾಗಿ ತನ್ನ ಚಾನಲ್‌ನಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಾನೆ. ಹೀಗಾಗುತ್ತಿದ್ದಂತೆಯೇ ಅವನ ಸುತ್ತಲಿನ ಇಕೋಸಿಸ್ಟಂ ಕುಸಿಯುತ್ತದೆ. ಅವನ ಪ್ರಕಾರ ಪಕ್ಷ ಅವನ ಯೂಟ್ಯೂಬ್ ಚಾನಲ್ಲನ್ನು ಷಾಡೋ ಬ್ಯಾನ್ ಮಾಡಿಸುತ್ತಾರೆ. ಷಾಡೋ ಬ್ಯಾನ್ ಎಂದರೆ ಆ ಚಾನಲ್ಲನ್ನು ಪ್ರತಿಬಂಧಿಸದೇ, ಅದು ಹೆಚ್ಚಿನ ಜನಕ್ಕೆ ತಲುಪದಂತೆ ಅದನ್ನು ಶಾಂತಗೊಳಿಸುವುದು. ಅದರ ಬಗ್ಗೆ ಸ್ಪಷ್ಟವಾದ ಮಾಹಿತಿಯಿಲ್ಲವಾದರೂ, ಅವನ ಚಾನಲ್‌ಗೆ ಸಬ್‌ಸ್ಕ್ರೈಬ್ ಮಾಡುವವರ ಸಂಖ್ಯೆ ವಿಪರೀತವಾಗಿ ಕುಸಿಯುತ್ತದೆ. ಬಲಪಂಥದ ಇಕೋ ಸಿಸ್ಟಂನಿಂದ ಅವನಿಗೆ ಬರುತ್ತಿದ್ದ ಯಾವುದೇ ಬೆಂಬಲ ಇದ್ದಕ್ಕಿದ್ದಂತೆ ಒಣಗುತ್ತದೆ. ಕೋಪಗೊಂಡು ತನ್ನ ಅಷ್ಟೂ ಚೈತನ್ಯವನ್ನು ಪಕ್ಷದ ವಿರುದ್ದ ಕೇಂದ್ರೀಕರಿಸಿದರೂ, ವಿಚಾರಧಾರೆ ಇನ್ನಷ್ಟು ಬಲಕ್ಕೆ ವಾಲುತ್ತದೆ.

ಈ ಪುಸ್ತಕದಲ್ಲಿ ಬಲಪಂಥೀಯ ರಾಜಕೀಯ ವ್ಯವಸ್ಥೆ ಸಂಸ್ಕೃತಿ ಮತ್ತು ಸಾಂಸ್ಕೃತಿಗಕ ವ್ಯಕ್ತಿಗಳನ್ನ – ಹಾಡು, ಕವಿತೆ, ಬರವಣಿಗೆಯ ಮೂಲಕ ಹೇಗೆ ತಮ್ಮ ಅನುಕೂಲಕ್ಕೆ ರೂಪಿಸಿ ಉಪಯೋಗಿಸುತ್ತಾರೆನ್ನುವುದು ತಿಳಿಯುತ್ತದೆ. ಆದರೆ ಇದು ಮೂಲತಃ ನಂಬಿಕೆಗಳ ಆಧಾರದ ಮೇಲೆ ಭಕ್ತಿಮಾರ್ಗದಲ್ಲಿ ನಡೆಯುವುದರಿಂದ, ಭ್ರಮನಿರಸನಗೊಂಡವರು ನಂಬಿಕೆಗಳನ್ನು ಪ್ರತಿನಿಧಿಸಿದ ಪಕ್ಷದ ವಿರುದ್ಧ ಎದ್ದು ನಿಲ್ಲುತ್ತಾರಾಗಲೀ, ತಮ್ಮ ನಂಬಿಕೆಗಳನ್ನು ಪುನರಾವಲೋಕನ ಮಾಡಿಕೊಳ್ಳಬೇಕು ಅಂತ ಯಾರಿಗೂ ಅನ್ನಿಸುವುದಿಲ್ಲ. ಪಂಥ ಬಲಗಡೆಗೆ ವಾಲಿದರೂ, ಅದರಲ್ಲಿ ಭಿನ್ನಾಭಿಪ್ರಾಯದ ಅನೇಕ ವಾದ ಸರಣಿಗಳಿರಬಹುದಾದ ಸಾಧ್ಯತೆ ನಮಗೆ ಕಾಣಿಸುವುದೇ ಇಲ್ಲ. ಹೀಗಾಗಿಯೇ ಪುರೋಹಿತ್ ಅವರ ಪುಸ್ತಕ ನಮ್ಮಲ್ಲಿ ತೀವ್ರ ನಿರಾಶೆ ಮತ್ತು ಹತಾಶೆಯನ್ನುಂಟು ಮಾಡುತ್ತದೆ. ಅದೇ ಕಾಲಕ್ಕೆ ಬಲಪಂಥೀಯ ಇಕೋಸಿಸ್ಟಂ ಹೇಗೆ ಕೆಲಸ ಮಾಡಬಹುದು ಎನ್ನುವ ಒಳನೋಟಗಳೂ ನಮಗೆ ಸಿಗುತ್ತವೆ. ●